# ಕರ್ನಾಟಕ ಸರ್ಕಾರದ ನಡವಳಿಗಳು

**ವಿಷಯ:** ಶ್ರೀ ಕೆ. ಶಿವಲಿಂಗೇಗೌಡ, ಸಹಾಯಕ ಕೃಷಿ ಅಧಿಕಾರಿ (ನಿವೃತ್ತ), ಸಹಾಯಕ ಕೃಷಿ ನಿರ್ದೇಶಕರ ಕಛೇರಿ. ಮಳವಳ್ಳಿ, ಇವರ ವಿರುದ್ಧ ಹಣ ದುರುಪಯೋಗದ ಬಗ್ಗೆ ಶಿಸ್ತು ಕ್ರಮ.

**ಓದಲಾಗಿದೆ:-**

1) ಕೃಷಿ ಆಯುಕ್ತರ ಕಾರಣ ಕೇಳುವ ಪತ್ರ ಸಂ. ಸಿಬ್ಬಂದಿ-1/ ವಿಚಾರಣೆ-4/ ಮಂಡ್ಯ, /2/2008-09. ದಿನಾಂಕ: 17-10-2008.
2) ಕೃಷಿ ಆಯುಕ್ತರ ಕಛೇರಿ ಆದೇಶ ಸಂ. ಸಿಬ್ಬಂದಿ-1/ವಿಚಾರಣೆ-4/ ಮಂಡ್ಯ, /2/2008-09. ದಿನಾಂಕ: 29-06-2009.
3) ಶ್ರೀ ಕುಕ್ಕಾಜೆ ರಾಮಕೃಷ್ಣ ಭಟ್, ನಿವೃತ್ತ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು, ಹಾಗೂ ವಿಚಾರಣಾಧಿಕಾರಿಯವರು ವಿಚಾರಣಾ ವರದಿ ನೀಡಿದ ದಿನಾಂಕ: 08-12-2010.

*********

**ಪ್ರಸ್ತಾವನೆ:**

ಮೇಲೆ ಕ್ರ.ಸಂ. (1)ರಲ್ಲಿ ಓದಲಾದ ದಿನಾಂಕ: 17-10-2008ರ, ಕಾರಣ ಕೇಳುವ ಪತ್ರದಲ್ಲಿ ಕೃಷಿ ಆಯುಕ್ತರು, ಶ್ರೀ ಕೆ. ಶಿವಲಿಂಗೇಗೌಡ, ಸ.ಕೃ.ಅ(ನಿವೃತ್ತ) ಇವರು ಹಲಗೂರು ರೈತ ಸಂಪರ್ಕ ಕೇಂದ್ರದಲ್ಲಿ 2004-05 ಮತ್ತು 2005-06ನೇ ಸಾಲಿನಲ್ಲಿ ಸಹಾಯಕ ಕೃಷಿ ಅಧಿಕಾರಿಯಾಗಿ ಕಲಸ ನಿರ್ವಹಿಸುತ್ತಿದ್ದ ಅವಧಿಯಲ್ಲಿ ರೂ. 2268/-ನ್ನು ಎನ್.ಎಸ್.ಸಿ. ಮೈಸೂರು ಇಲ್ಲಿಗೆ ಹಿಂತಿರುಗಿಸದೇ, ಹಾಗೂ ರೂ. 45,752/-ಗಳ ಕೃಷಿ ಪರಿಕರಗಳನ್ನು ಮಾರಾಟ ಮಾಡಿದ ಹಣವನ್ನು ಸಂಬಂಧಿಸಿದ ಸಂಸ್ಥೆಗೆ ಪಾವತಿಸದೇ ದುರುಪಯೋಗಪಡಿಸಿಕೊಂಡಿದ್ದ ಬಗ್ಗೆ ಹಾಗೂ ದಾಖಲಾತಿ ವಹಿಯಲ್ಲಿ ದಾಸ್ತಾನನ್ನು ಲೆಕ್ಕಕ್ಕೆ ತಗದುಕೊಳ್ಳದಿರುವ ಆರೋಪಕ್ಕೆ ಸಂಬಂಧಿಸಿದಂತೆ ಕರ್ನಾಟಕ ನಾಗರಿಕ ಸೇವಾ ನಿಯಮಾವಳಿ ನಿಯಮ 214ರಡಿ ಕಾರಣ ಕೇಳುವ ಪತ್ರವನ್ನು ದೋಷರೋಪಣಾ ಪಟ್ಟಿಯೊಂದಿಗೆ ಜಾರಿ ಮಾಡಿದ್ದು, ಸದರಿ ದೋಷರೋಪಣಾಪಟ್ಟಿಗೆ ಶ್ರೀ ಕೆ. ಶಿವಲಿಂಗೇಗೌಡ ಸಹಾಯಕ ಕೃಷಿ ಅಧಿಕಾರಿಯವರು ನಿಗದಿತ ಅವಧಿಯೊಳಗೆ ಯಾವುದೇ ಲಿಖಿತಹೇಳಿಕೆಯನ್ನು ನೀಡಲಿಲ್ಲವಾದ್ದರಿಂದ, ಸದರಿ ಪ್ರಕರಣದಲ್ಲಿ ಸತ್ಯಾ-ಸತ್ಯತೆಯನ್ನು ತಿಳಿದುಕೊಳ್ಳುವ ಸಲುವಾಗಿ ಮೇಲೆ ಕ್ರಮಸಂಖ್ಯೆ (2)ರಲ್ಲಿ ಓದಲಾದ ಕೃಷಿ ಆಯುಕ್ತರ ಕಛೇರಿ ಆದೇಶ ದಿನಾಂಕ: 29-06-2009ರಲ್ಲಿ, ಇಲಾಖಾ ವಿಚಾರಣೆ ನಡಸಲು ಶ್ರೀ ಕುಕ್ಕಾಜೆ ರಾಮಕೃಷ್ಣ ಭಟ್. ನಿವೃತ್ತ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು. ಇವರನ್ನು ವಿಚಾರಣಾಧಿಕಾರಿಯವರನ್ನಾಗಿ. ಶ್ರೀ ಹೊಂಬಯ್ಯ. ಅಧೀಕ್ಷಕರು. ಜಂಟಿ ಕೃಷಿ ನಿರ್ದೇಶಕರ ಕಛೇರಿ, ಮಂಡ್ಯ ಇವರನ್ನು ಮಂಡನಾಧಿಕಾರಿಯಾಗಿ ನೇಮಿಸಲಾಯಿತೆಂದು ತಮ್ಮ ಪ್ರಸ್ತಾವನೆಯಲ್ಲಿ ತಿಳಿಸಿರುತ್ತಾರೆ. ಕ್ರ ಸಂ. (3) ಶ್ರೀ ಕುಕ್ಕಾಜೆ ರಾಮಕೃಷ್ಣ ಭಟ್. ನಿವೃತ್ತ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು. ಪ್ರಕರಣದಲ್ಲಿ ಕೂಲಂಕಷವಾಗಿ ವಿಚಾರಣೆ ನಡೆಸಿ, ವಿಚಾರಣಾ ವರದಿಯನ್ನು ಸಲ್ಲಿಸಿರುತ್ತಾರೆಂದು ಮತ್ತು ವಿಚಾರಣೆಯಲ್ಲಿ ಆರೋಪಿತ ಅಧಿಕಾರಿಯವರ ಮೇಲಿನ ಆರೋಪ ಸಾಬೀತಾಗಿಲ್ಲವೆಂದು ವಿಚಾರಣಾ ವರದಿ ಸಲ್ಲಿಸಿರುತ್ತಾರೆಂದು ವರದಿ ಮಾಡಿರುವರು.

38

ವಿಚಾರಣಾ ವರದಿಯಲ್ಲಿನ ಮುಖ್ಯವಾದ ಸಂಕ್ಷಿಪ್ತ ವಿವರಣೆಯೇನೆಂದರೆ, ಯಾವುದೇ ಪ್ರಕರಣದಲ್ಲಿ, ಒಬ್ಬ ಸರ್ಕಾರಿ ಅಧಿಕಾರಿಯವರ ವಿರುದ್ಧ ಆಪಾದನೆ ಮಾಡುವಾಗ ಸದರಿ ಅಧಿಕಾರಿಗಳು ಹಣ ದುರುಪಯೋಗಪಡಿಸಿಕೊಂಡಿರುವ ದಿನ, ಸ್ಥಳ, ವೇಳೆ ಮತ್ತು ಅವರು ದುರುಪಯೋಗಪಡಿಸಿಕೊಂಡಿರುವ ಒಟ್ಟು ಹಣದ ವಿವರ, ಹಣ ದುರುಪಯೋಗಕ್ಕೆ ಸಂಬಂಧಿಸಿದಂತೆ ಸ್ಪಷ್ಟವಾಗಿ, ನೇರವಾಗಿ ದೃಢೀಕರಿಸುವಂತಹ ದಾಖಲೆಗಳನ್ನು ನೀಡುವುದು ಪ್ರಥಮ ತನಿಖಾಧಿಕಾರಿಯವರ ಕರ್ತವ್ಯ ಹಾಗೂ ಮೂಲಭೂತ ಕರ್ತವ್ಯವೆಂದು ಉಲ್ಲೇಖಿಸಿರುತ್ತಾರೆ. ಅಲ್ಲದೆ ಸದರಿ ಆರೋಪಿತ ಅಧಿಕಾರಿಯವರ ಮೇಲಿನ ಆರೋಪಕ್ಕೆ ಸಂಬಂಧಪಟ್ಟಂತೆ ಒದಗಿಸಿರುವ ದಾಖಲೆಗಳು ಅಸಂಗಾತ್ಯವಾಗಿದ್ದು, ಆರೋಪಿತ ಅಧಿಕಾರಿಯವರು ಸದರಿ ಆರೋಪ ಎಸಗಿರುತ್ತಾರೆಂಬುದಕ್ಕೆ ಈ ದಾಖಲೆಗಳು ಸಾಕ್ಷಿಯಾಗಿರುವುದಿಲ್ಲವೆಂದೂ, ವಿಚಾರಣಾಧಿಕಾರಿಗಳು ವರದಿ ನೀಡಿ, ಶ್ರೀ ಕೆ. ಶಿವಲಿಂಗೇಗೌಡ, ಸಹಾಯಕ ಕೃಷಿ ಅಧಿಕಾರಿ (ನಿವೃತ್ತ) ಸಹಾಯಕ ಕೃಷಿ ನಿರ್ದೇಶಕರ ಕಛೇರಿ, ಮಳವಳ್ಳಿ, ಇವರ ವಿರುದ್ಧ ಹಣ ದುರುಪಯೋಗವಾಗಿದೆಯೆಂದು ಹೊರಿಸಿರುವ ಆರೋಪವು ರುಜುವಾತಾಗಿಲ್ಲವೆಂದು ನಿರ್ಣಯ ನೀಡಿದ್ದಾರೆ. ವಿಚಾರಣಾಧಿಕಾರಿಯವರು ನಿವೃತ್ತ ಜಿಲ್ಲಾ ನ್ಯಾಯಾಧೀಶರಾಗಿದ್ದು ಆಪಾದಿತರ ಮೇಲಿನ ಆಪಾದನೆ ಸಾಬೀತಾಗುವುದಿಲ್ಲವೆಂದು ನಿರ್ಣಯ ನೀಡಿರುವುದರಿಂದ ಸದರಿ ವರದಿಯನ್ನು ಒಪ್ಪಿ ಶ್ರೀ ಕೆ. ಶಿವಲಿಂಗೇಗೌಡ, ಸಹಾಯಕ ಕೃಷಿ ಅಧಿಕಾರಿ(ನಿವೃತ್ತ) ರವರನ್ನು ದೋಷಮುಕ್ತಗೊಳಿಸಲು ನಿರ್ಧರಿಸಿದೆ.

ಅದರಂತೆ ಕೆಳಕಂಡ ಆದೇಶ

**ಸರ್ಕಾರದ ಆದೇಶ ಸಂಖ್ಯೆ: ಕೃಇ 19 ಕೃಪವಿ 2011, ದಿನಾಂಕ: 22-09-2011.**

ಪ್ರಸ್ತಾವನೆಯಲ್ಲಿ ವಿವರಿಸಿರುವ ಕಾರಣಗಳಿಂದಾಗಿ ಶ್ರೀ ಕೆ. ಶಿವಲಿಂಗೇಗೌಡ, ಸಹಾಯಕ ಕೃಷಿ ಅಧಿಕಾರಿ.(ನಿವೃತ್ತ) ಸಹಾಯಕ ಕೃಷಿ ನಿರ್ದೇಶಕರ ಕಛೇರಿ ಮಳವಳ್ಳಿ ಮಂಡ್ಯ ಜಿಲ್ಲೆ ಇವರನ್ನು ಅವರ ಮೇಲಿನ ಆರೋಪಗಳಿಂದ ದೋಷಮುಕ್ತಗೊಳಿಸಿ ಆದೇಶಿಸಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ.

(ಮಂಜುನಾಥ ಪಾಟೀಲ್) 22/9/11
ಸರ್ಕಾರದ ಅಧೀನ ಕಾರ್ಯದರ್ಶಿ,
ಕೃಷಿ ಇಲಾಖೆ.

ಇವರಿಗೆ:

1. ಮಹಾಲೇಖಪಾಲರು ಕರ್ನಾಟಕ, ಬೆಂಗಳೂರು.
2. ಆಯುಕ್ತರು, ಕೃಷಿ ಇಲಾಖೆ, ಶೇಷಾದ್ರಿ ರಸ್ತೆ, ಬೆಂಗಳೂರು.

3. ಜಂಟಿ ಕೃಷಿ ನಿರ್ದೇಶಕರು ಮಂಡ್ಯ.
4. ಸಹಾಯಕ ಕೃಷಿ ನಿರ್ದೇಶಕರು ಮಳವಳ್ಳಿ ಮಂಡ್ಯ ಜಿಲ್ಲೆ.
5. ಮಾನ್ಯ ಕೃಷಿ ಸಚಿವರ ಆಪ್ತ ಕಾರ್ಯದರ್ಶಿಗಳು, ವಿಧಾನ ಸೌಧ, ಬೆಂಗಳೂರು.
6. ಸರ್ಕಾರದ ಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿಗಳು, ಕೃಷಿ ಇಲಾಖೆ, ಬೆಂಗಳೂರು.
7. ಸರ್ಕಾರದ ಜಂಟಿ ಕಾರ್ಯದರ್ಶಿ, ಕೃಷಿ ಇಲಾಖೆ ಅವರ ಆಪ್ತ ಸಹಾಯಕರು.
8. ಸಂಬಂಧಪಟ್ಟ ಅಧಿಕಾರಿಯವರಿಗೆ (ಕೃಷಿ ಆಯುಕ್ತರ ಮೂಲಕ)
9. ಶಾಖಾ ರಕ್ಷಾ ಕಡತ/ಹೆಚ್ಚುವರಿ ಪ್ರತಿಗಳು.